The total cost of these 19 fire stations would around Rs. 11 crores.

There are about 262 direct recruitment vacancies of Firemen, Firemen drivers, sub-officers in the Fire services Department. The matter of permitting the Fire Services to to fill up these vacancies in relaxation of the economy orders is under active consideration of the Government.

There are 92 promotional vacancies in the cadre of Leading firemen. This could not be filled up as Special Leave petition is pending before the Supreme Court of India.

In the year 1988–89, the Fire Services Department attended 3,213 fire calls and saved Rs. 16.72 crores of property out of Rs. 24.54 crores involved of these Fire accidents. They also saved 114 human lives and 8 animal lives in that year.

During the year 1989–90, the Fire Service Department answered 3,656 fire calls and managed to save Rs. 35.58 crores of property out of Rs. 48.81 crores involved in the Fire accidents. They also saved 175 human lives and 23 animal lives from fire.

The Department has been doing good work and there has been no delay in attending to any Fire Calls. Government will do all its best to strengthen the Fire Services Department within the availability of resources.

4) ರಾಜ್ಯ ಗಡಿ ಪ್ರದೇಶದಲ್ಲಿ ಬರುವ ರಸ್ತೆ, ಸೇತುವೆಗಳ ಕಾಮಗಾರಿಗಳನ್ನು ಜರೂರಾಗಿ ಮಾಡಿಸುವುದು.

ಶ್ರೀ ಕೆ. ಕುಶಾಲ :– ಕರ್ನಾಟಕ ರಾಜ್ಯ ಗಡಿ ಪ್ರದೇಶದಲ್ಲಿ ಕ್ಷೇತ್ರವಾರು ಬರುವ ರಸ್ತೆ, ಸೇತುವೆ ನಿರ್ಮಾಣಕೆ ಕಾಮಗಾರಿ ಮಂಜೂರಾತಿ ಮತ್ತು ಹಣ ಬಿಡುಗಡೆ ಯಾವ ಹಂತದಲ್ಲಿದೆ ? ಮತ್ತು ಜಿಲ್ಲಾ ಪರಿಷತ್ ವ್ಯಾಪಿಯಲ್ಲಿ ಬರುವ ರಸ್ತೆಗಳು ಜಿಲ್ಲಾ ಪರಿಷತ್‌ಗಳ ಅಧೀನದಲ್ಲಿ ಅಭಿವೃದ್ಧಿ ಪಡಿಸಲು ಅಸಾಧ್ಯವಾದಂತೆ ಕ್ಷೇತ್ರಗಳಲ್ಲಿ ಬರುವ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾಪವನ್ನು ಸರಕಾರಕ್ಕೆ ಕಳಿಸಲಾಗಿದ್ದು ಈ ಕಾಮಗಾರಿ ಮಂಜೂರಾತಿ ಮತ್ತು ಹಣ ಬಿಡುಗಡೆ ಯಾವ ಹಂತದಲ್ಲಿದೆ ? ಅಲ್ಲದೆ ಕ್ಷೇತ್ರದಲ್ಲಿ ಬರುವ (ಎ. ಪಿ. ಎಂ. ಸಿ.) ಕೃಷಿ ಉತ್ಪನ್ನ ಸೂರ್ಕೆಟಿಂಗ್ ಸೊಸೈಟಿ ಯೋಜನೆಯಂತೆ ತೆಗೆದುಕೊಂಡ ಕಾಮಗಾರಿಗಳ ಮಂಜೂರಾತಿ ಮತ್ತು ಹಣ ಬಿಡುಗಡೆ ಗೊಳಿಸುವುದು ಎನ್ನಲಾದ ಪ್ರಸ್ತಾವನೆ ಹಾಗೂ ಸರಕಾರದ ಆದೇಶ ಯಾವ ಹಂತವಲ್ಲಿದೆ ? ಸದರಿ ಬಾಬಿನ ಕಾಮಗಾರಿಗಳನ್ನು ಕೂಡಲೇ ತೆಗೆದುಕೊಳ್ಳುವುದೇ ? ಇಲ್ಲವಾದಲ್ಲಿ ಚಾಲ್ತಿ ಹಣಕಾಸಿನ ವರ್ಷದ ಕೊನೆಯಲ್ಲಿ ಕಾಮಗಾರಿ ಮಂಜೂರಾತಿ, ಹಣ ಬಿಡುಗಡೆ ಮಾಡಿದಾಗ ಕೆಲಸ ಕಾಮಗಾರಿ ನಷ್ಟ, ಹಾಗೂ ಬಿಡುಗಡೆ ಗೊಳಿಸಿದ ಹಣ ಲ್ಯಾಪ್ಸ್ ಆಗುವುದು ಮಾತ್ರ ವಲ್ಲದೇ ಕಾಮಗಾರಿ ವಹಿಸಿಕೊಳ್ಳಲು ಜನ ಬರುತ್ತಿಲ್ಲ. ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲ ಮೇ ತಿಂಗಳಲ್ಲೇ ಪ್ರಾರಂಭವಾಗುವುದರಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಸದರಿ ಬಾಬಿನ ಕಾಮಗಾರಿಗಳ ಮಂಜೂರಾತಿ ಹಾಗೂ ಹಣ ಬಿಡುಗಡೆಯನ್ನು ಕೂಡಲೇ ಮಾಡುವಂತೆ ಸರಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– (ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು):–ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ, ಈ ಹೇಳಿಕೆಯನ್ನು ಕೊಡುತ್ತಿದ್ದೇನೆ.

ಮಾನ್ಯ ಸದಸ್ಯರು ತಮ್ಮ ಗಮನ ಸೆಳೆಯುವ ಸೂಚನೆಯಲ್ಲಿ ಮೂರು ವಿಷಯಗಳನ್ನು ಎತ್ತಿದ್ದಾರೆ. ಅವುಗಳು ಈ ಕೆಳಕಂಡಂತಿವೆ.

1) ಕರ್ನಾಟಕ ರಾಜ್ಯ ಗಡಿ ಪ್ರದೇಶದಲ್ಲಿ ಬರುವ ರಸ್ತೆ, ಸೇತುವೆ ನಿರ್ಮಾಣಕ್ಕೆ ಹಣ ಬಿಡುಗಡೆಯ ಬಗ್ಗೆ

ಮಾನ್ಯ ಹಣಕಾಸಿನ ಸಚಿವರು 1990–91 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕರ್ನಾಟಕ ರಾಜ್ಯದ ಗಡಿ ಪ್ರದೇಶದ ಅಭಿವೃದ್ಧಿಗೆ 5.0 ಕೋಟಿ ರೂ. ಗಳ ಅನುದಾನವನ್ನು ನಿಗದಿಪಡಿಸಲಾಗಿದೆ ಎಂದು ಸೂಚಿಸಿದರು ಈ ಬಗ್ಗೆ ರಸ್ತೆಯ ಅಭಿವೃದ್ಧಿಯನ್ನು ತೆಗೆದುಕೊಳ್ಳುವುದಕ್ಕೆ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಮುಖ್ಯ ಇಂಜಿನಿಯರುಗಳಿಂದ ತರಿಸಿ, ಕ್ರೋಢೀಕರಿಸಲಾಗಿದೆ. ಈ ಬಗ್ಗೆ ಸೂಕ್ತ ಅನುದಾನವನ್ನು ಬಿಡುಗಡೆ ಮಾಡುವುದಕ್ಕಾಗಿ ವಿಷಯವು ಯೋಜನಾ ಇಲಾಖೆಯ ಪರಿಶೀಲನೆಯಲ್ಲಿ ಇದೆ. ಈ ಬಗ್ಗೆ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು.

2) ಜಿಲ್ಲಾ ಪರಿಷತ್ತಿನ ಅನುದಾನದಲ್ಲಿ ಬರುವ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ :

ಜಿಲ್ಲಾ ಪರಿಷತ್ತಿನ ಅನುದಾನದಲ್ಲಿರುವ ಗ್ರಾಮೀಣ ರಸ್ತೆಗಳನ್ನು ಹಾಗೂ ಇತರ ಜಿಲ್ಲಾ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ, ಲೋಕೋಪಯೋಗಿ ಇಲಾಖೆಯ ಅಧಿಕಾರದ ವ್ಯಾಪ್ತಿಗೆ ತೆಗೆದುಕೊಳ್ಳುವಂತೆ ಬಹಳವಾಗಿ ಬೇಡಿಕೆಗಳು ಬಂದಿವೆ. ಈ ಬಗ್ಗೆ ಒಟ್ಟಾಗಿ ಬಂದಿರುವ 9845 ಕಿ. ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಒಟ್ಟಾರೆ 6 ಸಾವಿರ ಕಿ. ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಈ ಪ್ರಸ್ತಾವನೆಯು ಆರ್ಥಿಕ ಇಲಾಖೆ ಹಾಗೂ ಯೋಜನಾ ಇಲಾಖೆಯಲ್ಲಿ ಅನುದಾನವನ್ನು ನಿಗದಿ ಮಾಡುವ ಬಗ್ಗೆ ತೀವ್ರ ಪರಿಶೀಲನೆಯಲ್ಲಿದೆ.

3) ಎ. ಪಿ. ಎಂ. ಸಿ. ಫಂಡಿನ ಅಡಿಯಲ್ಲಿ ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ :

1990–91 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಆರ್ಥಿಕ ಸಚಿವರು ಎ. ಪಿ. ಎಂ. ಸಿ.ಗಳಲ್ಲಿರುವ ಇದುಗಂಟಿನಿಂದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಪ್ರಸ್ತಾಪವನ್ನು ಮಾಡಿದ್ದರು. ಇದರಲ್ಲಿ 1990–91ನೇ ಸಾಲಿಗೆ ಸುಮಾರು 20.0 ಕೋಟಿ ರೂ.ಗಳ ಅಭಿವೃದ್ಧಿ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪ ವಿದ್ದಿತು. ಈ ಬಗ್ಗೆ ಎ.ಪಿ.ಎಂ.ಸಿ. ಫಂಡ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಶೀಘ್ರವೇ ಒಂದು ತೀರ್ಮಾನ ತೆಗೆದುಕೊಳ್ಳಲಾಗುವುದು.

ಮೇಲ್ಕಂಡ ಮೂರು ಕಾಮಗಾರಿಗಳ ಅಡಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಶೀಘ್ರ ತೀರ್ಮಾನ ತೆಗೆದುಕೊಳ್ಳಲಾಗುವುದು.

5) ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಹಾಸಿಗೆಗಳನ್ನು ಹೆಚ್ಚಿಸುವದು.

ಶ್ರೀ ಎಂ. ಎಸ್. ಆತ್ಮಾನಂದ :– ಮಾನ್ಯ ಉಪಾಧ್ಯಕ್ಷೀಣಿಯವರೇ, ಮಂಡ್ಯ ನಗರದಲ್ಲಿ ಜಿಲ್ಲಾ ಆಸ್ಪತ್ರೆಯಿದ್ದು, ಈ ಆಸ್ಪತ್ರೆಯಲ್ಲಿ ಸುಮಾರು ಇನ್ನೂರೈವತ್ತು ಹಾಸಿಗೆಗಳಿವೆ. ಎಲ್ಲಾ ವಿಧವಾದ ವಿಶೇಷ ತಜ್ಞರನ್ನೊಳಗೊಂಡಿರುವ ಆಸ್ಪತ್ರೆ ಇಡೀ ಜಿಲ್ಲೆಯಲ್ಲಿ ಇದು ಒಂದೇ ಆಗಿದ್ದು, ಜಿಲ್ಲೆಯ ಜನತೆಗೆ ವೈದ್ಯಕೀಯ ಸೇವಾ ಸೌಲಭ್ಯವನ್ನು ಒದಗಿಸುತ್ತದೆ. ಆದರೆ, ಈ ಆಸ್ಪತ್ರೆಗೆ ಬರುತ್ತಿರುವ ಒಳರೋಗಿಗಳ ಸಂಖ್ಯೆ ಬಹಳ ಹೆಚ್ಚಾಗಿದ್ದು ಆಸ್ಪತ್ರೆಯಲ್ಲಿರುವ ಹಾಸಿಗೆಗಳು, ಈ ರೋಗಿಗಳಿಗೆ ಸಾಲದಾಗಿದೆ. ನೆಲದ ಮೇಲೆ ರೋಗಿಗಳನ್ನು ಮಲಗಿಸುತ್ತಾ ಇದ್ದು ತುಂಬಾ ತೊಂದರೆಯಾಗಿದೆ. ಕಳೆದ ಎರಡು ಮೂರು ವರ್ಷಗಳಿಂದ ಹಾಸಿಗೆ ಸಂಖ್ಯೆ ಹೆಚ್ಚಿಸಲು ಸಾರ್ವಜನಿಕರು ಸರ್ಕಾರಕ್ಕೆ ಮಾಡಿರುವ ಈ ವರೆಗಿನ ಮನವಿಗಳು ಫಲಪ್ರದವಾಗಿಲ್ಲ. ಹಾಸಿಗೆಗಳ ಸಂಖ್ಯೆಗಳನ್ನು ಹೆಚ್ಚಿಸುವುದು ಅತೀ ಅವಶ್ಯವಾಗಿದೆ ಹಾಗೂ ಜರೂರಾಗಿದೆ. ಆದುದರಿಂದ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸಲು ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಉಪಾಧ್ಯಕ್ಷೀಣಿಯವರೇ, ಮಂಡ್ಯ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಾಲಿ 250 ಹಾಸಿಗೆಗಳಿವೆ. ಈ ಹಾಸಿಗೆಗಳ ಸಂಖ್ಯೆಯನ್ನು 650 ಕ್ಕೆ ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಇದಕ್ಕೆ ತಗಲುವ ಅನಾವರ್ತ ಅಂದಾಜು ವೆಚ್ಚವು ರೂ. 5–00 ಕೋಟಿ ಇರುತ್ತದೆ.